

بسم اللہِ الرّحمٰن الرّحیم

**ನಾವು ಸರ್ವ ಲೋಕ ಪರಿಪಾಲಕನಾದ ಅಲ್ಲಾಹನ ಸ್ವಭಾವ ಗುಣಗಳನ್ನು ಪ್ರಕಟಪಡಿಸುವವರಾಗಬೇಕಾದರೆ, ನಾವು ನಮ್ಮ ಸ್ವಂತ ಕೈಗಳಿಂದ ಕೆಲಸ ಮಾಡಬೇಕು ಮತ್ತು ಬಡವರ ಸೇವೆಗೋಸ್ಕರ ಸಿದ್ಧರಾಗಬೇಕು**

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 01–05–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತಕ್ಕೆ ಸಂಬಂಧಿಸಿದ ಘಟನೆಗಳನ್ನು ವಿವರಿಸುವಾಗ ಅವುಗಳಿಂದ ಸೂಕ್ಷ್ಮವಾಗಿ ಎಂತಹ ಪರಿಣಾಮಗಳನ್ನು ವಿವರಿಸುತ್ತಾರೆಂದರೆ ಅವುಗಳ ಮೂಲಕ ಒಬ್ಬ ಸತ್ಯವಿಶ್ವಾಸಿಗೆ ಸತ್ಯವಿಶ್ವಾಸದ ಸರಿಯಾದ ಮಾರ್ಗಗಳ ಕಡೆಗೆ ಸೂಚನೆ ಸಿಗುತ್ತವೆ. ಆ ಮೂಲಕ ಅಲ್ಲಾಹನ ಮತ್ತು ಧರ್ಮದ ವಾಸ್ತವಿಕತೆಯನ್ನು ಅರಿತುಕೊಳ್ಳುತ್ತಾನೆ. ಒಮ್ಮೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಆಯತುಲ್ ಕುರ್‌ಸೀ ಬಗ್ಗೆ ವ್ಯಾಖ್ಯಾನ ನೀಡುತ್ತಿದ್ದಾಗ ಅದರ

لَهُ مَا فِي السَّمَاوَاتِ وَمَا فِي الأَرْضِ مَنْ ذَا الَّذِي يَشْفَعُ عِنْدَهُ إِلاَّ بِإِذْنِهِ

**ಲಹು ಮಾಫಿಸ್ಸಮಾವಾತಿ ವ ಮಾಫಿಲ್ ಅರ್‌ಝಿ ಮನ್‌ಝುಲ್ಲಝೀ ಯಶ್‌ಫಉ ಇಂದಹೂ ಇಲ್ಲಾ ಬಿಇಝ್‌ನಿಹೀ** ಎಂಬ ಭಾಗವನ್ನು ವಿವರಿಸುತ್ತಾ ಹೇಳಿದರು: "ಆಕಾಶ ಮತ್ತು ಭೂಮಿಯಲ್ಲಿ ಇರುವ ಎಲ್ಲವೂ ಅಲ್ಲಾಹನಿಗೆ ಸೇರಿವೆ. ಇಂತಹ ಯಜಮಾನ ನಮಗಿರುವಾಗ ನೀವು ಬೇರೆ ಯಾರನ್ನಾದರೂ ಅವನ ಎದುರಿಗೆ ನಿಮ್ಮ ಯಜಮಾನನನ್ನಾಗಿ ಹೇಗೆ ತಾನೆ ಮಾಡಬಲ್ಲಿರಿ. ಜನರು ಹೇಳುತ್ತಾರೆ ನಾವು ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸುವುದಿಲ್ಲ ಎಂದು. ಆದರೆ ಅವರು ಕೆಲವು ಮಹಾತ್ಮರನ್ನು ಬೇಡಿಕೊಳ್ಳುತ್ತಾರೆ. ಆ ಜನರು ಅಲ್ಲಾಹನ ಸಾಮೀಪ್ಯಗಳಿಸಿದವರಾಗಿದ್ದಾರೆ, ಅಲ್ಲಾಹನ ಸನ್ನಿಧಿಯಲ್ಲಿ ಅವರು ನಮ್ಮ ಪರವಾಗಿ ಶಿಫಾರಸು ಮಾಡುವವರೆಂದು ಅವರು ಭಾವಿಸುತ್ತಾರೆ."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮುಂದುವರಿಸಿ ಹೇಳುತ್ತಾರೆ: "ಅಲ್ಲಾಹನು ಹೇಳುತ್ತಾನೆ: ನಮ್ಮ ಅನುಮತಿಯ ವಿನಾ ಯಾರಿಗೂ ಶಿಫಾರಸು ಮಾಡಲು ಸಾಧ್ಯವಿಲ್ಲ ಎಂದು. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿಂತ ಶ್ರೇಷ್ಠ ಮನುಷ್ಯ ಬೇರೆಯಾರಿದ್ದಾರೆ. ಇಂತಹ ಶ್ರೇಷ್ಠ ಪದವಿ ಗಳಿಸಿದಂತಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಮ್ಮೆ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹೇಬರ ಪುತ್ರ ಅಬ್ದುರ್ರಹೀಮ್ ಖಾನ್ ರೋಗಗ್ರಸ್ತರಾಗಿದ್ದಾಗ ಅವರಿಗೋಸ್ಕರ ಪ್ರಾರ್ಥಿಸಿದಾಗ ಇಲ್‌ಹಾಮ್ ಲಭಿಸಿತು: 'ಈತ ರಕ್ಷಿಸಲ್ಪಡಲಾರನು' ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯೋಚಿಸಿದರು– ನವಾಬ್ ಸಾಹೇಬರು ತಮ್ಮ ಎಲ್ಲವುಗಳನ್ನೂ ಬಿಟ್ಟು ಖಾದಿಯಾನಿಗೆ ಬರುತ್ತಿದ್ದಾರೆ. ಅವರ ಪುತ್ರ ಮೃತನಾದರೆ ಅವರಿಗೆ ಅದು ದೊಡ್ಡ ಪರೀಕ್ಷೆ ಆಗಬಹುದು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ಸನ್ನಿಧಿಯಲ್ಲಿ ನಿವೇದಿಸಿದರು– ಓ ಅಲ್ಲಾಹ್ ಈ ಹುಡುಗನಿಗೆ ಆರೋಗ್ಯ ದಯಪಾಲಿಸಬೇಕೆಂದು ನಾನು ಶಿಫಾರಸು ಮಾಡುತ್ತೇನೆ ಎಂದು. ಆಗ ಪುನಃ ಇಲ್‌ಹಾಮ್ ಉಂಟಾಯಿತು– **ಮನ್‌ಝುಲ್ಲಝೀ ಯಶ್‌ಫಉ ಇಂದಹೂ ಇಲ್ಲಾ ಬಿಇಝ್‌ನಿಹೀ.** ನನ್ನ ಅನುಮತಿ ಇಲ್ಲದೆ ನನ್ನೊಡನೆ ಶಿಫಾರಸು ಮಾಡುವ ನೀನು ಯಾರು?

ನೋಡಿರಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಷ್ಟು ದೊಡ್ಡ ಮನುಷ್ಯರಾಗಿದ್ದರು. ಹದಿಮೂರು ನೂರು ವರ್ಷಗಳಿಂದ ಲೋಕವು ಅವರನ್ನು ಪ್ರತೀಕ್ಷಿಸುತ್ತಾ ಇತ್ತು. ಹೀಗಿದ್ದರೂ ಅವರು ಅಲ್ಲಾಹನೊಂದಿಗೆ ಶಿಫಾರಸು ಮಾಡಿದಾಗ ಅಲ್ಲಾಹನು ಹೇಳುತ್ತಾನೆ: ನನ್ನ ಅನುಮತಿ ಪಡೆಯದೆ ಶಿಫಾರಸು ಮಾಡುವ ನೀನು ಯಾರು? ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನಗೆ ಈ ರೀತಿ ಇಲ್‌ಹಾಮ್ ಅವತೀರ್ಣವಾದಾಗ ನಾನು ಬಿದ್ದು ಬಿಟ್ಟೆನು. ನನ್ನ ಶರೀರದಲ್ಲಿ ನಡುಕ ಪ್ರಾರಂಭವಾಯಿತು. ನನ್ನ ಜೀವ ಹೊರಟು ಹೋಗುವ ಹಾಗೆ ಆಯಿತು. ಇಂತಹ ಸ್ಥಿತಿಯಲ್ಲಿ ಅಲ್ಲಾಹನು ಹೇಳಿದನು– ನಾನು ನಿನಗೆ ಶಿಫಾರಸು ಮಾಡಲು ಅನುಮತಿ ನೀಡುತ್ತೇನೆ. ನೀನು ಶಿಫಾರಸು ಮಾಡು ಎಂದು. ಹಾಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಶಿಫಾರಸು ಮಾಡಿದರು ಮತ್ತು ಅಬ್ದುರ್ರಹೀಮ್ ಖಾನ್ ರೋಗಮುಕ್ತರಾದರು. ಅವರು ಆರೋಗ್ಯವಂತರಾದರು. ಇದು ಅಲ್ಲಾಹನ ಅನುಗ್ರಹದಿಂದ ಸಂಭವಿಸಿತು. ಅಲ್ಲಾಹನ ಅನುಮತಿ ದೊರೆತ ನಂತರ ಶಿಫಾರಸು ಮಾಡಿದಾಗ ಹೀಗೆ ಸಂಭವಿಸಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಂತಹ ದೊಡ್ಡ ಮನುಷ್ಯರೊಂದಿಗೆ ಸಹ ಅಲ್ಲಾಹನು 'ಅನುಮತಿ ಇಲ್ಲದೆ ಶಿಫಾರಸು ಮಾಡುವ ನೀನು ಯಾರು?' ಎಂದು ಕೇಳಿರುವಾಗ ತಾವೇ ದೊಡ್ಡ ಮನುಷ್ಯರೆಂದು ಹೇಳಿಕೊಂಡು ತಿರುಗಾಡುತ್ತಿರುವಂತಹ ಈ ಜನರಿಗೆ ಅಲ್ಲಾಹನೊಂದಿಗೆ ಶಿಫಾರಸು ಮಾಡುವರೆ ಸಾಧ್ಯವಾಗುವುದು ಹೇಗೆ?"

ಈ ವಿಷಯವನ್ನು ಪ್ರತಿಯೊಬ್ಬ ಅಹ್ಮದಿ ನೆನಪಿಟ್ಟುಕೊಳ್ಳಬೇಕು. ಅಲ್ಲಾಹನು ಹಝ್ರತ್ ಮುಹಮ್ಮದ್ ﷺರೊಂದಿಗೆ ಸಹ ಹೀಗೆ ಹೇಳಿದ್ದನು: ಯಾರಿಗೆ ಅನುಮತಿ ನೀಡಲ್ಪಡುವುದೋ ಅವನ ಶಿಫಾರಸು

ಮಾತ್ರ ಅಂಗೀಕರಿಸಲ್ಪಡುವುದು ಎಂದು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಹೇಗೆ ಪ್ರಕಟಿಸಿದನು ಎನ್ನುವುದರ ಬಗ್ಗೆ ಒಂದು ಉದಾಹರಣೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: "ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೆಮ್ಮು ಪ್ರಾರಂಭವಾಯಿತು. ಅವರಿಗೆ ಮದ್ದು ಕುಡಿಸುವ ಕೆಲಸ ನಾನು ಮಾಡುತ್ತಿದ್ದೆ. ನಾನು ಅವರೊಂದಿಗೆ ಸಲಹೆ ರೂಪದಲ್ಲಿ ಇದನ್ನು ತಿನ್ನಬೇಡಿರಿ, ಅದನ್ನು ತಿನ್ನಬೇಡಿರಿ ಎಂದು ಹೇಳುತ್ತಿದ್ದೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ತಯಾರಿಸಿದ ಮದ್ದು ಸಹ ಉಪಯೋಗಿಸಲ್ಪಡುತ್ತಿತ್ತು. ಇಂಗ್ಲಿಷ್ ಮದ್ದುಗಳೂ ಉಪಯೋಗಿಸಲ್ಪಟ್ಟವು. ಆದರೆ ಕೆಮ್ಮು ಗುಣವಾಗದೆ ಹೆಚ್ಚಾಗುತ್ತಿತ್ತು. ಇದು 1907ರ ಘಟನೆ ಆಗಿದೆ. ಜಮಾಅತ್‌ನಿಂದ ಹೊರ ಹೋದ ಅಬ್ದುಲ್ ಹಕೀಮ್ ಎಂಬ ಓರ್ವ ವ್ಯಕ್ತಿ ಈ ವಿಷಯ ಅರಿತುಕೊಂಡು ಮಿರ್ಝಾ ಸಾಹೇಬರು ಕ್ಷಯರೋಗ ಬಾಧಿತರಾಗಿ ಮೃತರಾಗುವರು ಎಂದು ಬರೆದಿದ್ದರು. ಆದುದರಿಂದ ಅವನಿಗೆ ವೃಥಾ ಸಂತೋಷಪಡಲು ಯಾವುದಾದರೂ ನೆಪ ದೊರಕಬಹುದೆಂಬ ಬಗ್ಗೆ ನಮಗೆ ಆತಂಕವಿತ್ತು. ಕೆಮ್ಮು ಅಧಿಕವಾಗಿದ್ದ ಆ ಸಂದರ್ಭದಲ್ಲಿ ಹೊರಗಿನಿಂದ ಬಂದ ಕೆಲವು ಸ್ನೇಹಿತರು ಹಣ್ಣುಗಳನ್ನು ಪಾರಿತೋಷಿಕವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೀಡಿದರು. ನಾನು ಅವುಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಇರಿಸಿದಾಗ ಅವರು ಅದರಿಂದ ಒಂದು ಬಾಳೆಹಣ್ಣು ಎತ್ತಿಕೊಂಡು– ಪ್ರಾಯಶಃ ನನಗೆ ಉಪದೇಶ ನೀಡುವ ಉದ್ದೇಶದಿಂದ ಇರಬಹುದು– ನನ್ನೊಡನೆ ಕೇಳಿದರು: ಬಾಳೆಹಣ್ಣು ಕೆಮ್ಮಿಗೆ ಉಪಯೋಗಿಸಬಹುದೇ? ಎಂದು. ಕೆಮ್ಮು ಇರುವಾಗ ಅದರ ಬಳಕೆ ಉತ್ತಮವಲ್ಲ ಎಂದು ನಾನು ಹೇಳಿದೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಗುಳು ನಗುತ್ತಾ ಬಾಳೆಹಣ್ಣು ಸುಲಿದು ತಿನ್ನತೊಡಗಿದರು. ನಾನು ಪುನಃ ನಿವೇದಿಸಿಕೊಂಡೆ– ಕೆಮ್ಮು ಬಹಳ ತೀವ್ರವಾಗಿದೆ ಇದು ತಿನ್ನುವುದು ಉತ್ತಮವಲ್ಲ ಎಂದು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುಗುಳು ನಗುತ್ತಾ ಹಣ್ಣು ತಿನ್ನುತ್ತಲೇ ಇದ್ದರು. ನಾನು ನನ್ನ ಅವಿವೇಕದ ಕಾರಣದಿಂದ ಈ ಹಣ್ಣು ತಿನ್ನಬಾರದು ಎಂದು ಮತ್ತೆ ಮತ್ತೆ ಹೇಳುತ್ತಾ ಇದ್ದೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುಗುಳು ನಗುತ್ತಾ ಹೇಳಿದರು: ನನಗೆ ಈಗ ತಾನೆ ಇಲ್‌ಹಾಮ್ ಉಂಟಾಗಿದೆ– **ಖಾಂಸಿ ದೂರ್ ಹೋಗಯೀ.** 'ಕೆಮ್ಮು ದೂರ ಸರಿಯಿತು' ಎಂದು. ಆ ಕ್ಷಣದಿಂದ ಕೆಮ್ಮು ನಿವಾರಣೆಗೊಂಡಿತು. ಆ ಸಂದರ್ಭದಲ್ಲಿ ಯಾವ ಮದ್ದನ್ನೂ ಉಪಯೋಗಿಸಿರಲಿಲ್ಲ. ಯಾವುದೇ ಪಥ್ಯ ಮಾಡಿರಲೂ ಇಲ್ಲ. ವಾಸ್ತವದಲ್ಲಿ ಪಥ್ಯಕ್ಕೆ ವಿರುದ್ಧವಾಗಿ ವರ್ತಿಸಲಾಗಿತ್ತು. ಹೀಗಿದ್ದರೂ ಕೆಮ್ಮು ದೂರ ಸರಿಯಿತು. ಅದರ ಮೊದಲು ಒಂದು ತಿಂಗಳ ಕಾಲ ಚಿಕಿತ್ಸೆ ನಡೆಸಲಾಗುತ್ತಿತ್ತು. ಆದರೆ ಕೆಮ್ಮು ಶಮನವಾಗಿರಲಿಲ್ಲ. ಅಲ್ಲಾಹನ ಹಸ್ತಕ್ಷೇಪದಿಂದ ಕೆಮ್ಮು ದೂರ ಸರಿಯಿತು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಲೇಖ್‌ರಾಮನಿಗೆ ಸಂಬಂಧಿಸಿ ಒಂದು ಘಟನೆ ವಿವರಿಸುತ್ತಾರೆ. ಅದರಿಂದ ಸಹ ಸತ್ಯವಿಶ್ವಾಸ ತಾಜಾ ಆಗುತ್ತದೆ. "ಅಲ್ಲಾಹನು ನಿರ್ಧರಿಸುವುದಾದರೆ ಆರೋಗ್ಯದಾಯಕವಾದ ಎಲ್ಲ ಸನ್ನಿವೇಶಗಳಿದ್ದರೂ ಅವನು ರೋಗ ಉಂಟು ಮಾಡಬಲ್ಲವನಾಗಿದ್ದಾನೆ. ಲೇಖ್‌ರಾಮನಿಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ತಿಳಿಸಿದ್ದನು: ಈದ್ ಹಬ್ಬದ ಮರುದಿನ ಲೇಖ್‌ರಾಂ ಸಾಯುವನು ಎಂದು. ಆದರೆ ಬಾಹ್ಯ ಸನ್ನಿವೇಶಗಳು ಅದಕ್ಕೆ ವಿರುದ್ಧವಾಗಿದ್ದುವು. ಮಾರ್ಚ್ 6ನೇ ದಿನಾಂಕ ಅವನ ಸಾವು ನಿರ್ಧರಿಸಲ್ಪಟ್ಟ ದಿನವಾಗಿತ್ತು. ಅವನಿಗೆ ಹೊರಗೆ ವಾಸಿಸಲು ಸಂದರ್ಭ ದೊರೆತಿದ್ದರೂ ಅವನು ಲಾಹೋರಿಗೆ ಆಗಮಿಸಿದನು ಮತ್ತು ನಿಗದಿತ ದಿನ ಕೊಲ್ಲಲ್ಪಟ್ಟನು. ಇದನ್ನು ಉದಾಹರಣೆಯಾಗಿ ನೀಡಿರುವುದರ ಉದ್ದೇಶವೇನೆಂದರೆ– ಆರೋಗ್ಯ ಮತ್ತು ಸಂರಕ್ಷಣೆಯ ವ್ಯವಸ್ಥೆ ಇದ್ದರೂ ಸಹ ಮನುಷ್ಯನು ನಾಶವಾಗಬಲ್ಲನು. ಅಲ್ಲಾಹನು ಮನುಷ್ಯನ ಕೆಲಸಗಳಲ್ಲಿ ಹಸ್ತಕ್ಷೇಪ ನಡೆಸುತ್ತಾನೆ. ಅವನು ತಾನು ಇಷ್ಟಪಡುವ ಹಾಗೆ ತನ್ನ ಶಕ್ತಿ ಸಾಮರ್ಥ್ಯಗಳನ್ನು ಪ್ರಕಟಿಸುತ್ತಾನೆ ಎಂಬುದನ್ನು ತಿಳಿಸಲಿಕ್ಕಾಗಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರ ಮುಬಾರಕ್ ಅಹ್ಮದ್ ಸಾಹೇಬರಿಗೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: "ನಮ್ಮ ಒಬ್ಬ ಚಿಕ್ಕ ಸಹೋದರ ಮುಬಾರಕ್ ಅಹ್ಮದ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಹಳ ಪ್ರಿಯನಾಗಿದ್ದನು. ನಾವು ಚಿಕ್ಕ ಮಕ್ಕಳಾಗಿದ್ದಾಗ ಕೋಳಿ ಸಾಕುತ್ತಿದ್ದೆವು. ನಾವು ಬೆಳಗ್ಗೆ ಎದ್ದು ಕೋಳಿಗೂಡು ತೆರೆದು ಕೋಳಿಗಳು ಹಾಕಿದ್ದ ಮೊಟ್ಟೆಗಳನ್ನು ಎಣಿಸಿ ನನ್ನ ಕೋಳಿ ಇಷ್ಟು ಮೊಟ್ಟೆ ಹಾಕಿತು ಎಂದೆಲ್ಲಾ ಒಬ್ಬರಿನ್ನೊಬ್ಬರ ಎದುರು ಹೇಳಿ ಜಂಬಕೊಚ್ಚುತ್ತಿದ್ದೆವು. ಮುಬಾರಕ್ ಅಹ್ಮದ್ ಸಹ ನಮ್ಮ ಜೊತೆಗೆ ಸೇರಿದ್ದನು. ಮುಬಾರಕ್ ಅಹ್ಮದ್‌ನಿಗೆ ಕಾಯಿಲೆ ಆದಾಗ ನಮ್ಮ ಮನೆಯ ಕೆಲಸದ ಹೆಂಗಸು (ದಾದಿ ಎಂದು ನಾವು ಆಕೆಯನ್ನು ಕರೆಯುತ್ತಿದ್ದೆವು) ಹೇಳಿದರು: ಮುಬಾರಕ್ ಅಹ್ಮದ್‌ಗೆ ರೋಗ ಬಾಧಿಸಲು ಕಾರಣ ಅವನು ಕೋಳಿಗಳ ಹಿಂದೆ ಓಡುತ್ತಾ ಇರುತ್ತಾನೆ. ಕೊಳಕಾದ ಕೋಳಿಗೂಡಿನ ಸಮೀಪವಿರುತ್ತಾನೆ. ಇದೇ ರೋಗಕ್ಕೆ ಕಾರಣ ಎಂದು ಹೇಳಿದರು. ಈ ಮಾತನ್ನು ಆಲಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ತಾಯಿಯವರೊಂದಿಗೆ ಹೇಳಿದರು: ಕೋಳಿಗಳನ್ನು ಎಣಿಸಿ ಅದರ ಬೆಲೆಯನ್ನು ಮಕ್ಕಳಿಗೆ ಕೊಟ್ಟು ಕೋಳಿಗಳನ್ನೆಲ್ಲಾ ಕೊಯಿದು ತಿಂದು ಬಿಡೋಣ ಎಂದು ಹೇಳಿದರು."

ಮುಬಾರಕ್ ಅಹ್ಮದ್‌ರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಷ್ಟೊಂದು ಪ್ರೀತಿಸುತ್ತಿದ್ದರು. ಅವನು ರೋಗಗ್ರಸ್ತನಾಗಿದ್ದಾಗ ಅವನ ಚಿಕಿತ್ಸೆಗೋಸ್ಕರ ಬಹಳ ಪ್ರಯತ್ನಮಾಡಿದ್ದರು. ಹೀಗಿದ್ದರೂ ಅವನು ಮೃತನಾದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರದರ್ಶಿಸಿದ ಸಹನೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅನೇಕ ಸಂದರ್ಭಗಳಲ್ಲಿ ವಿವರಿಸಿದ್ದಾರೆ. ಅವರು ಹೀಗೆ ಬರೆಯುತ್ತಾರೆ: “ನಮ್ಮ ಚಿಕ್ಕ ಸಹೋದರ ಮುಬಾರಕ್ ಅಹ್ಮದ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಹಳ ಪ್ರೀತಿ ಇತ್ತು. ಅವನು ರೋಗಿಯಾದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಷ್ಟು ಕಷ್ಟಪಟ್ಟು ಚಿಕಿತ್ಸೆ ನಡೆಸಿದರೆಂದರೆ ಕೆಲವು ಜನರು ಯೋಚಿಸುತ್ತಿದ್ದರು– ಮುಬಾರಕ್ ಅಹ್ಮದ್ ಮೃತನಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತೀವ್ರ ದುಃಖವಾಗುವುದು ಎಂದು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಬಹಳ ಧೈರ್ಯಶಾಲಿಯಾಗಿದ್ದರು. ಯಾವ ದಿನ ಮುಬಾರಕ್ ಅಹ್ಮದ್ ಮೃತನಾದನೋ ಆ ದಿನ ಸುಬ್‌ಹ್ ನಮಾಝ್ ಅನುಷ್ಠಿಸಿದನಂತರ ಅವರು ಮುಬಾರಕ್ ಅಹ್ಮದ್‌ನನ್ನು ಕಾಣಲು ಹೋದರು. ಆ ಸಮಯದಲ್ಲಿ ಮುಬಾರಕ್ ಅಹ್ಮದನಿಗೆ ಮದ್ದು ಕುಡಿಸುವ ಮತ್ತು ಅವನನ್ನು ಆರೈಕೆ ಮಾಡುವ ಕೆಲಸ ನನಗೆ ವಹಿಸಿಕೊಡಲಾಗಿತ್ತು. ನಾನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರನ್ನು ಕರೆದುಕೊಂಡು ಹೋದೆನು. ಅಲ್ಲಿ ಡಾಕ್ಟರ್ ಮಿರ್ಝಾ ಯಕೂಬ್ ಬೇಗ್ ಇದ್ದರು. ಪ್ರಾಯಶಃ ಡಾಕ್ಟರ್ ಖಲೀಫ ರಶೀದುದ್ದೀನ್ ಸಾಹೇಬ್ ಸಹ ಇದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಮುಬಾರಕ್ ಅಹ್ಮದನನ್ನು ನೋಡಲು ಹೋದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮಗು ನಿದ್ರಿಸುತ್ತಿದೆ ಅವನ ಸ್ಥಿತಿ ಉತ್ತಮಗೊಂಡಿದೆ ಎಂದು ತೋರುತ್ತದೆ. ಆದರೆ ವಾಸ್ತವದಲ್ಲಿ ಅದು ಮುಬಾರಕ್ ಅಹ್ಮದನ ಅವಸಾನದ ಘಳಿಗೆಯಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ನಾಡಿ ಪರೀಕ್ಷೆ ನಡೆಸಿದಾಗ ನಾಡಿ ಸ್ಪಂದನ ತಿಳಿಯಲಿಲ್ಲ. ಅವರು ಹೇಳಿದರು: ‘ಹುಝೂರ್ ಬೇಗನೆ ಕಸ್ತೂರಿ ತನ್ನಿರಿ’ ಹುಡುಗನ ಮೊಣಕೈ ಹತ್ತಿರ ನಾಡಿ ಪರೀಕ್ಷೆ ನಡೆಸಿದಾಗಲೂ ನಾಡಿಮಿಡಿತ ಕಂಡು ಬರಲಿಲ್ಲ. ಅವರು ಪುನಃ ಗಾಬರಿಗೊಂಡು ಹೇಳಿದರು: ಹುಝೂರ್ ಬೇಗನೆ ಕಸ್ತೂರಿ ತನ್ನಿರಿ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೀಲಿಕೈಗಳ ಗೊಂಚಲಿನಿಂದ ಕೀಲಿಯನ್ನು ಹುಡುಕಿ ಪೆಟ್ಟಿಗೆ ತೆರೆಯಲು ಪ್ರಯತ್ನಿಸುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹುಡುಗನ ಕಂಕುಳ ಸಮೀಪ ನಾಡಿ ಪರೀಕ್ಷೆ ನಡೆಸಿದಾಗ ಅಲ್ಲಿಯೂ ಅವರಿಗೆ ನಾಡಿಮಿಡಿತ ತಿಳಿಯಲಿಲ್ಲ. ಆಗ ಸಹ ಅವರು ಹೇಳಿದರು– ಹುಝೂರ್ ಬೇಗನೆ ಕಸ್ತೂರಿ ತನ್ನಿರಿ.

ಖಲೀಫತುಲ್ ಮಸೀಹ್ ಅವ್ವಲ್ ಬಹಳ ಧೈರ್ಯಶಾಲಿಗಳಾಗಿದ್ದರೂ ಮುಬಾರಕ್ ಅಹ್ಮದ್ ಮೃತನಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತೀವ್ರ ದುಃಖ ಆಗುವುದೆಂದು ಯೋಚಿಸಿದಾಗ ಅವರ ಕಾಲುಗಳು ನಡುಗ ತೊಡಗಿದುವು. ಅವರಿಗೆ ನಿಲ್ಲಲಾಗಲಿಲ್ಲ. ಅವರು ನೆಲದಲ್ಲಿ ಕುಳಿತು ಬಿಟ್ಟರು. ಅವರು ಹೀಗೆ ಯೋಚಿಸಿದ್ದರು: ಪ್ರಾಯಶಃ ನಾಡಿ ಹೃದಯದ ಸಮೀಪ ಚಲಿಸುತ್ತಿರಬಹುದು ಮತ್ತು ಕಸ್ತೂರಿಯಿಂದ ಅದನ್ನು ಪೂರ್ವ ಸ್ಥಿತಿಗೆ ತರಬಹುದು ಎಂದು. ಆದರೆ ಅವರ ಈ ಯೋಚನೆ ಊಹಾತ್ಮಕವಾಗಿದೆ ಎಂದು ಅವರ ಧ್ವನಿಯಿಂದಲೇ ಭಾಸವಾಗುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಧ್ವನಿಯ ತೀವ್ರತೆಯನ್ನು ಕಂಡಾಗ ಅವರಿಗೆ ಅದು ಮುಬಾರಕ್ ಅಹ್ಮದನ ಕೊನೆಯ ಘಳಿಗೆ ಎಂದು ತಿಳಿಯಿತು. ಅವರು ಪೆಟ್ಟಿಗೆ ತೆರೆಯುವುದನ್ನು ಬಿಟ್ಟರು. ಮತ್ತು ಹೇಳಿದರು: ‘ಮೌಲವಿ ಸಾಹೇಬ್, ಪ್ರಾಯಶಃ ಹುಡುಗ ಮೃತನಾಗಿದ್ದಾನೆ. ನೀವು ಇಷ್ಟು ಗಾಬರಿಗೊಳ್ಳುವುದು ಏಕೆ? ಅವನು ಅಲ್ಲಾಹನು ನೀಡಿದ ಒಂದು ಅಮಾನತ್ ಆಗಿದ್ದನು. ಅದನ್ನು ಅವನು ಮರಳಿ ತೆಗೆದುಕೊಂಡು ಹೋಗಿರುವನು. ಅದರ ಬಗ್ಗೆ ನಮಗೆ ಆಕ್ಷೇಪವಿರಲು ಹೇಗೆ ತಾನೆ ಸಾಧ್ಯ? ಅಲ್ಲಾಹನ ಇಚ್ಛೆಗೆ ನಾವು ಸಂಪೂರ್ಣ ವಿಧೇಯರಾಗಿದ್ದೇವೆ ಎಂದು ಹೇಳಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೂಡಲೆ ತಮ್ಮ ಸ್ನೇಹಿತರಿಗೆ ಪತ್ರ ಬರೆಯಲು ಪ್ರಾರಂಭಿಸಿದರು.”

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸ್ಥಳದಲ್ಲಿ ಹೀಗೆ ಬರೆಯುತ್ತಾರೆ: “ಖಾದಿಯಾನ್‌ನಲ್ಲಿರುವ ಜನರು ನೋಡಿರಬಹುದು. ಮೌಲವಿ ಅಬ್ದುಲ್ ಕರೀಮ್ ಸಾಹೇಬರ ಮತ್ತು ಮುಬಾರಕ್ ಅಹ್ಮದರ ರೋಗಾವಸ್ಥೆಯಲ್ಲಿ ಅವರ ಚಿಕಿತ್ಸೆಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಷ್ಟು ಲಕ್ಷ್ಯ ನೀಡಿದರೆಂದು. ಆಗ ಅದನ್ನು ನೋಡುವವರು ಹೀಗೆ ಯೋಚಿಸುತ್ತಿದ್ದರು– ತನ್ನ ಜಮಾಅತಿನ ಅಭಿವೃದ್ಧಿ ಇವರ ಜೀವಿತವನ್ನು ಹೊಂದಿಕೊಂಡಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಭಾವಿಸುತ್ತಿದ್ದರೋ ಎಂಬಂತೆ. ಆ ಕಾಲದಲ್ಲಿ ಯಾವ ಚಿಕಿತ್ಸೆ ನಡೆಸಲಾಗಿದೆ, ಯಾವ ಮದ್ದು ನೀಡಲಾಗಿದೆ, ಎಂಬ ಮಾತುಗಳ ಹೊರತು ಬೇರೆ ಯಾವುದೂ ಚರ್ಚಿಸಲಾಗುತ್ತಿರಲಿಲ್ಲ. ಆದರೆ ಅವರು ಮೃತರಾದಾಗ ಎಂತಹ ಪರಿಸ್ಥಿತಿ ಉಂಟಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಲ್ಲಿ ತಕ್ಷಣ ಎಂತಹ ಬದಲಾವಣೆ ಉಂಟಾಯಿತೆಂದರೆ ಅದರಿಂದ ಆಶ್ಚರ್ಯ ತಲೆ ದೋರುತ್ತದೆ. ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಮೃತರಾದ ನಂತರ ಮತ್ತು ಮುಬಾರಕ್ ಅಹ್ಮದ್ ಮೃತರಾದ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅತ್ಯಂತ ಪ್ರಸನ್ನ ವದನರಾಗಿ ಜನರೊಡನೆ ಹೇಳುತ್ತಿದ್ದರು– ಇವರ ಮೃತ್ಯುವಿನ ಬಗ್ಗೆ ಅಲ್ಲಾಹನು ತನಗೆ ಮುಂಚಿತವಾಗಿ ತಿಳಿಸಿದ್ದನು ಎಂದು.”

ಮುಬಾರಕ್ ಅಹ್ಮದ್ ಸಾಹೇಬರ ಮೃತ್ಯುವಿಗೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಸಹ ಬರೆದಿದ್ದಾರೆ: "ಮುಬಾರಕ್ ಅಹ್ಮದ್ ಮೃತರಾದ ಕೂಡಲೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮನೆಯಿಂದ ಹೊರಗೆ ಬಂದರು. ಅಲ್ಲಿ ಹೊರಗಿನಿಂದ ಬಂದು ಜಮಾಯಿಸಿದ್ದ ಜನರ ಮುಂದೆ ಭಾಷಣ ಮಾಡುತ್ತಾ ಹೇಳಿದರು: 'ಇದು ನಮ್ಮ ಜಮಾಅತಿಗೆ ಅಲ್ಲಾಹನಿಂದ ಒಂದು ಪರೀಕ್ಷೆಯಾಗಿದೆ. ಇಂತಹ ಪರೀಕ್ಷೆಗಳ ಕಾರಣ ನಮ್ಮ ಜಮಾಅತ್ ದುಃಖಿಸಬಾರದು. ಮುಬಾರಕ್ ಅಹ್ಮದ್ ಬಗ್ಗೆ ನನಗೆ ಹಿಂದೆಯೇ ಇಲ್‌ಹಾಮ್ ಅವತೀರ್ಣವಾಗಿತ್ತು. ಅವನು ಚಿಕ್ಕ ವಯಸ್ಸಿನಲ್ಲಿ ಮೃತನಾಗುವನು ಎಂದು ತಿಳಿಸಲಾಗಿತ್ತು. ಅಲ್ಲಾಹನ ದೃಷ್ಟಾಂತ ಈಡೇರಿತು ಎಂದು ನಾವು ಸಂತೋಷಪಡಬೇಕು' ಎಂದು ಹೇಳಿದರು."

ಈ ಘಟನೆಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ವಭಾವ ಗುಣದ ವಿವಿಧ ಪಾರ್ಶ್ವಗಳನ್ನು ಬಹಿರಂಗಪಡಿಸುತ್ತವೆ. ತನ್ನ ಮಗನ ಚಿಕಿತ್ಸೆಗಾಗಿ ಚಿಂತೆ ಮತ್ತು ತನ್ನ ಸಮೀಪದ ಸ್ನೇಹಿತನ ಚಿಕಿತ್ಸೆಗಾಗಿ ಕಾಳಜಿ ಇವುಗಳು ಮಾತ್ರವಲ್ಲ ಅಲ್ಲಾಹನ ಭವಿಷ್ಯವಾಣಿಗಳು ಈಡೇರಿದ ಬಗ್ಗೆ ಸಂತೋಷ ಸಹ ಅವರು ಸೂಚಿಸಿದರು. ಅಲ್ಲಾಹನ ವಿಧಿ ನಿರ್ಣಯದ ಬಗ್ಗೆ ಯಾವುದೇ ಆಕ್ಷೇಪ ತೋರ್ಪಡಿಸದೆ ಏನೂ ಸಂಭವಿಸಲಿಲ್ಲ ಎಂಬಂತೆ ವರ್ತಿಸಿದರು. ಜಮಾಅತಿನ ಜನರು ಅಲ್ಲಾಹನ ಇಚ್ಛೆ ಬಗ್ಗೆ ಗಮನ ಹರಿಸಿ ಉನ್ನತ ಉದ್ದೇಶ ಲಕ್ಷ್ಯಗಳನ್ನು ಗಳಿಸಲು ಪ್ರಯತ್ನಿಸಬೇಕೆಂದು ಉಪದೇಶಿಸಲಾಗಿದೆ. ಮುಖ್ಯ ಉದ್ದೇಶಲಕ್ಷ್ಯ ಅಲ್ಲಾಹನ ಸಂಪ್ರೀತಿಗಳಿಸುವುದಾಗಿದೆ. ಅವನು ನೀಡಿದ ಭವಿಷ್ಯವಾಣಿಗಳು ಈಡೇರಿದಾಗ ಸಮಾಧಾನವಾಗುವುದಾದರೂ ಮಾನವರ ಸೇವೆ ಮಾಡಬೇಕಾದ ಸಂದರ್ಭದಲ್ಲಿ ಪೂರ್ಣ ಶ್ರದ್ಧೆಯಿಂದ ಅದನ್ನು ನಿರ್ವಹಿಸಬೇಕೆಂಬ ಉಪದೇಶವನ್ನು ಸಹ ಇಲ್ಲಿ ನೀಡಲಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಶಾರೀರಿಕವಾಗಿ ಸೇವೆ ಮಾಡುವ ಬಗ್ಗೆ ಒಂದು ಉದಾಹರಣೆಯನ್ನು ಹೀಗೆ ವಿವರಿಸಿದ್ದಾರೆ: "ನನಗೆ ಒಂದು ದೃಶ್ಯವನ್ನು ಮರೆತು ಬಿಡಲಾಗುವುದಿಲ್ಲ. ನನಗೆ ಹದಿನಾರು ಹದಿನೇಳು ವರ್ಷ ಪ್ರಾಯವಾದಾಗ ನನ್ನ ಚಿಕ್ಕ ತಂಗಿ ಕೆಲವೇ ತಿಂಗಳ ಪ್ರಾಯದಲ್ಲಿ ಮೃತಳಾದಳು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆ ಮಗುವಿನ ಜನಾಝವನ್ನು ಸ್ವತಃ ತನ್ನ ಕೈಯಲ್ಲಿ ಎತ್ತಿಕೊಂಡು ಹೊರಟರು. ಆಗ ಮಿರ್ಝಾ ಇಸ್ಮಾಈಲ್ ಬೇಗ್ ಹೇಳಿದರು: ಅದನ್ನು ನಾನು ಎತ್ತಿಕೊಳ್ಳುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ಇದು ನನ್ನ ಮಗಳ ಜನಾಝ ಆಗಿದೆ' ಅವರು ಹೇಳಿದುದರ ಅರ್ಥವೇನೆಂದರೆ, ನನ್ನ ಮಗಳಿಗೆ ನಾನು ಮಾಡಬಹುದಾದ ಕೊನೆಯ ಸೇವೆ ಇದಾಗಿದೆ. ಆದುದರಿಂದ ನಾನೇ ಅವಳ ಜನಾಝ ಎತ್ತಿಕೊಂಡು ಹೋಗುವೆನು ಎಂಬುದಾಗಿತ್ತು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಘಟನೆಯಿಂದ ಹೀಗೆ ನಿಷ್ಕರ್ಷೆ ಮಾಡುತ್ತಾರೆ: "ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಸ್ವಭಾವ ಗುಣಗಳನ್ನು ನೀವು ಪ್ರಕಟಿಸುವವರಾಗಬೇಕಾದರೆ ನೀವು ಶಾರೀರಿಕವಾಗಿ ಮನುಷ್ಯರ ಸೇವೆ ಮಾಡಬೇಕು. ನೀವು ಧಾರ್ಮಿಕ ಸೇವೆಗೋಸ್ಕರ ನಿಮ್ಮ ಎಲ್ಲ ಆಸ್ತಿಯನ್ನು ಕೊಡುವುದಾದರೆ ಮತ್ತು ನಿಮ್ಮ ಎಲ್ಲ ಆದಾಯ ಇಸ್ಲಾಮಿನ ಪ್ರಚಾರಕ್ಕಾಗಿ ನೀಡುವುದಾದರೆ ನೀವು **ಮಲಿಕಿಯ್ಯತ್** ಎಂಬ ಗುಣ ಪ್ರಕಟಿಸುತ್ತೀರಿ. ಆದರೆ **ರಬ್ಬುಲ್ ಆಲಮೀನ್** ಎಂಬ ಗುಣ ಪ್ರಕಟಿಸುವವರಾಗಲಾರಿರಿ. ಏಕೆಂದರೆ ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಸ್ವಭಾವ ಗುಣಗಳನ್ನು ಪ್ರಕಟಿಸುವವರಾಗಬೇಕಾದರೆ ನೀವು ನಿಮ್ಮ ಕೈಗಳಿಂದ ಕೆಲಸಮಾಡಬೇಕು. ಮತ್ತು ಬಡವರ ಸೇವೆಗೋಸ್ಕರ ಸಿದ್ಧರಾಗಬೇಕು. **ರಬ್ಬುಲ್ ಆಲಮೀನ್** (ಸರ್ವಲೋಕ ಪರಿಪಾಲಕನಾದ) ಅಲ್ಲಾಹನ ಸ್ವಭಾವ ಗುಣಗಳನ್ನು ಪ್ರಕಟಿಸಲಿಕ್ಕಾಗಿ ತನ್ನ ಕೈಗಳಿಂದ ನೀವು ನಿಮ್ಮ ಸ್ವಂತದವರ ಮಾತ್ರವಲ್ಲ ಅನ್ಯರ ಸೇವೆಯನ್ನು ಸಹ ಮಾಡಲು ಪ್ರಯತ್ನಿಸಬೇಕೆನ್ನುವುದು ಇದರ ಮೂಲಕ ಪ್ರಕಟಪಡಿಸಲಾದ ಬಹಳ ಸುಂದರ ವ್ಯಾಖ್ಯಾನವಾಗಿದೆ. ನೀವು ಯೋಚಿಸುವುದಾದರೆ ಅದರಿಂದ ಬಹಳ ವ್ಯಾಪಕ ಪರಿಣಾಮಗಳು ಉಂಟಾಗುವುದೆಂದು ಕಾಣಬಹುದು. ಅದು ಜನಾಂಗವನ್ನು ಬಲವಾಗಿ ಪರಸ್ಪರ ಜೋಡಿಸುತ್ತದೆ. ಒಬ್ಬರಿನ್ನೊಬ್ಬರ ಸೇವೆ ಮಾಡುವುದರಿಂದ ಮತ್ತು ಸಮಾಜದ ಪ್ರತಿಯೊಂದು ಭಾಗ ಅದನ್ನು ಅನುಷ್ಠಾನಕ್ಕೆ ತರುವುದರಿಂದ ಒಂದು ಸಂತೋಷ ಭರಿತ ಸಮಾಜ ನಿರ್ಮಾಣವಾಗುವುದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನ ಬಗ್ಗೆ ಇದ್ದ ಭರವಸೆ ತಮ್ಮ ಪ್ರಾರ್ಥನೆ ಅಂಗೀಕಾರವಾಗುವ ಬಗ್ಗೆ ಇದ್ದ ವಿಶ್ವಾಸ ಮತ್ತು ತಮ್ಮ ಸತ್ಯತೆಯ ಬಗ್ಗೆ ಇದ್ದ ದೃಢನಂಬಿಕೆ ಇವುಗಳಿಗೆ ಸಂಬಂಧಿಸಿ ಒಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಕಪುರ್ತಲದ ಅಹ್ಮದಿಯರ ಮತ್ತು ಅಹ್ಮದಿಯೇತರರ ಮಧ್ಯೆ ಒಂದು ಮಸ್‌ಜಿದ್‌ಗೆ ಸಂಬಂಧಿಸಿ ಮೊಕದ್ದಮೆ ನಡೆಯುತ್ತಿತ್ತು. ಮೊಕದ್ದಮೆಯ ವಿಚಾರಣೆ ನಡೆಸುತ್ತಿದ್ದ ನ್ಯಾಯಾಧೀಶರು ಅಹ್ಮದಿಯರ ವಿರುದ್ಧವಾಗಿ ವರ್ತಿಸುವ ಹಾಗೆ ತೋರುತ್ತಿತ್ತು. ಕಪುರ್ತಲದ ಅಹ್ಮದಿಯರು ಗಾಬರಿಗೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಪ್ರಾರ್ಥನೆಗೋಸ್ಕರ ಅಪೇಕ್ಷಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು– ನಾನು ಸತ್ಯವಂತನಾದರೆ ಮಸ್‌ಜಿದ್ ನಿಮಗೆ ಸಿಗುವುದು. ಇತ್ತ ನ್ಯಾಯಾಧೀಶ ಅಹ್ಮದಿಯರ ವಿರುದ್ಧ ತೀರ್ಪು ಬರೆದಿದ್ದರು. ಅದನ್ನು ಓದಿ ಹೇಳಬೇಕಾದ ದಿನದಂದು ಮನೆಯಿಂದ ಹೊರಡುವಾಗ ತನ್ನ ನೌಕರನಿಗೆ

ತನ್ನ ಬೂಟು ಕಾಲಿಗೆ ಹಾಕಲು ಹೇಳಿದರು. ನೌಕರ ಒಂದು ಬೂಟನ್ನು ಕಾಲಿಗೆ ತೊಡಿಸಿ ಎರಡನೆಯ ಬೂಟು ಕಾಲಿಗೆ ಹಾಕುತ್ತಿದ್ದಂತೆಯೇ ನ್ಯಾಯಾಧೀಶ ಹೃದಯ ಸ್ತಂಭನದಿಂದ ಮೃತನಾದನು. ಅನಂತರ ಹೊಸ ನ್ಯಾಯಾಧೀಶ ಅಹ್ಮದಿಯರ ಪರವಾಗಿ ತೀರ್ಪು ನೀಡಿದರು. ಇದು ಬಹಳ ದೊಡ್ಡ ಒಂದು ದೃಷ್ಟಾಂತವಾಗಿ ಜನರು ಗ್ರಹಿಸಿದರು. ಅಹ್ಮದಿಯರ ವಿಶ್ವಾಸ ಬಹಳ ದೃಢವಾಯಿತು. ಅಲ್ಲಾಹನು ತನ್ನ ಪ್ರವಾದಿಗಳ ಮೂಲಕ ಅನೇಕ ಅದೃಶ್ಯ ಸಮಾಚಾರ ನೀಡುತ್ತಾನೆ. ಅವು ಈಡೇರುವಾಗ ಸತ್ಯವಿಶ್ವಾಸಿಗಳ ವಿಶ್ವಾಸ ವರ್ಧಿಸುತ್ತದೆ. ಜನರು ಹಝ್ರತ್ ಮುಹಮ್ಮದ್ﷺರನ್ನು ನಂಬಿದುದು ಈ ಅದೃಶ್ಯ ಸಮಾಚಾರಗಳ ಕಾರಣದಿಂದಲೇ ಆಗಿದೆ. ಸಹಾಬರು ಅಲ್ಲಾಹನ ಮಾರ್ಗದಲ್ಲಿ ಹುತಾತ್ಮರಾಗುವಾಗ ಸಂತೋಷದಿಂದ ಹೇಳುತ್ತಿದ್ದರು: **ಫುಝ್ತು ವ ರಬ್ಬಿಲ್ ಕಅಬ** ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆನು ಎಂದು.”

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕಂಡ ದಿವ್ಯದರ್ಶನ ತಕ್ಷಣ ಈಡೇರಿದ ಒಂದು ಸಂಭವವನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: “ಮುಬಾರಕ್ ಅಹ್ಮದ್ ಮಂಚದ ಸಮೀಪ ಬಿದ್ದಿರುವುದಾಗಿಯೂ ಅವನಿಗೆ ತೀವ್ರ ಗಾಯವಾಗಿರುವುದಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ದಿವ್ಯದರ್ಶನದಲ್ಲಿ ಕಂಡರು. ಈ ದಿವ್ಯದರ್ಶನ ಕಂಡು ಮೂರು ಮಿನಿಟಿನೊಳಗೆ ಮುಬಾರಕ್ ಅಹ್ಮದ್ ಮಂಚದಿಂದ ಬಿದ್ದು ಬಿಟ್ಟನು. ಅವನಿಗೆ ತೀವ್ರಗಾಯ ಆಯಿತು. ಅವನ ಬಟ್ಟೆ ರಕ್ತದಿಂದ ಒದ್ದೆಯಾಯಿತು.”

ಖಾದಿಯಾನಿನ ಆರಂಭದ ಸ್ಥಿತಿಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: “ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆ ಯಾರೂ ಇರಲಿಲ್ಲ. ಈಗ ಸಾವಿರಾರು ಜನ ಅವರ ಜೊತೆಗಿದ್ದಾರೆ.” ಈಗಂತೂ ಲಕ್ಷಾಂತ ಜನರಿದ್ದಾರೆ. ಒಂದು ಕಾಲದಲ್ಲಿ ಪಂಜಾಬಿನಲ್ಲಿ ಸಹ ಅವರನ್ನು ನಂಬುವ ಯಾರೂ ಇರಲಿಲ್ಲ. ಈಗ ಹಿಂದೂಸ್ಥಾನದಲ್ಲಿ ಮಾತ್ರವಲ್ಲ ಲೋಕದ ಎಲ್ಲ ಭೂಖಂಡಗಳಲ್ಲಿ ಅವರನ್ನು ನಂಬುವ ಜನರಿದ್ದಾರೆ. ಅಹ್ಮದಿಯಾ ಜಮಾಅತಿನಲ್ಲಿ ಇಷ್ಟೆಲ್ಲ ಜನರು ಹೇಗೆ ಸೇರಿದರು. ಈಗ ಅಲ್ಲಾಹನ ಅನುಗ್ರಹದಿಂದ ದೇಶ ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಹಬ್ಬುತ್ತಿದೆ.

ಖಂಡಿತವಾಗಿಯೂ ಈ ಘಟನೆಗಳೆಲ್ಲಾ ವಿಶ್ವಾಸವರ್ಧಕವಾಗಿದೆ. ಅಲ್ಲಾಹನು ನಮ್ಮ ವಿಶ್ವಾಸ ವರ್ಧಿಸಲಿ. ಹಾಗೂ ನಾವು ಜಮಾಅತಿಗೆ ಹಿತವನ್ನು ತರುವವರಾಗೋಣ.

ಖುತ್‌ಬದ ಕೊನೆಗೆ ಹುಝೂರ್ ಕರಾಚಿಯ ನಸೀಮ್ ಮಹ್ಮೂದ್ ಸಾಹೇಬರ ಬಗ್ಗೆ ಪ್ರಸ್ತಾಪಿಸಿದರು. ಅವರು 27-4-2015ರಂದು ಕರಾಚಿಯಲ್ಲಿ 58ನೇ ವರ್ಷ ಪ್ರಾಯದಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ. ಮೃತರ ಉತ್ತಮ ಸ್ವಭಾವ ಗುಣಗಳ ಬಗ್ಗೆ ಹುಝೂರ್ ಪ್ರಸ್ತಾಪಿಸಿದರು ಮತ್ತು ಅವರ ಸದ್ಗತಿಗಾಗಿ ಪ್ರಾರ್ಥಿಸಿದರು.

--------------*****--------------

***Friday Sermon delivered by Hadrath Khaleefatul Masih Al Khamis***(atba)

*at Masjid Baithul Futhuh, London on 01-05-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon